# ಮದ್ಯಕ್ಕೆ ‘ಬೆವ್‌ಕ್ಯೂ’; ನಮ್ಮಲ್ಲೇಕಿಲ್ಲ!

■ **ಶಶಿಕುಮಾರ್ ಸಿ.**

ಕೊರೊನಾ ವೈರಸ್‌ನಿಂದ ಬಚಾವಾಗಲು ಜನರು ಸಾಮಾಜಿಕ ಅಂತರ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಹೆಚ್ಚಿನ ಜಾಗೃತಿಯನ್ನು ಕೇಂದ್ರ ಸರ್ಕಾರ ನೀಡುತ್ತಿದೆ. ಆದರೂ ಸಾಮಾಜಿಕ ಅಂತರದ ಬಗ್ಗೆ ಜನ ನಿರ್ಲಕ್ಷ್ಯದಿಂದ ಇದ್ದಾರೆ. ಅದರಲ್ಲೂ ಮದ್ಯದಂಗಡಿಗಳ ಎದುರಿನಲ್ಲಂತೂ ಸಾಮಾಜಿಕ ಅಂತರ ನಿಯಮವನ್ನು ಗಾಳಿಗೆ ತೂರಲಾಗುತ್ತಿದೆ.

ಈ ಸಮಸ್ಯೆಯ ನಿಯಂತ್ರಣಕ್ಕೆ ತಂತ್ರಜ್ಞಾನದ ಮೊರೆಹೋಗಿರುವ ಕೇರಳ ಸರ್ಕಾರವು ‘ಬೇವ್‌ಕ್ಯೂ’ ಆ್ಯಪ್ ಬಿಡುಗಡೆಗೊಳಿಸಿದ್ದು, ಅದರ ಮೂಲಕವೇ ಮದ್ಯ ಮಾರಾಟ ಮತ್ತು ಖರೀದಿಗೆ ಕಟ್ಟುನಿಟ್ಟಿನ ಆದೇಶ ಹೊರಡಿಸಿದೆ. ಇದರಿಂದಾಗಿ ಮದ್ಯದಂಗಡಿಗಳ ಬಳಿ ಜನರ ಜಮಾವಣೆ ಹಾಗೂ ಸಾಮಾಜಿಕ ಅಂತರ ನಿರ್ಲಕ್ಷ್ಯಕ್ಕೆ ಸಂಪೂರ್ಣ ತಡೆಯೊಡ್ಡಲಾಗಿದೆ.

ಸಾಮಾಜಿಕ ಅಂತರದ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಲು ಹಾಗೂ ಮದ್ಯದಂಗಡಿಗಳ ಮುಂದೆ ಕಿಲೋಮೀಟರ್‌ಗಟ್ಟಲೆ ನಿಲ್ಲುತ್ತಿದ್ದ ಜನರ ಸರದಿಗೆ ಕಡಿವಾಣ ಹಾಕುವ ಸಲುವಾಗಿ ಕೇರಳ ಸರ್ಕಾರ ಈ ಸ್ಮಾರ್ಟ್ ಯೋಜನೆಯನ್ನು ಜಾರಿಗೆ ತಂದಿದೆ.

ಮದ್ಯವನ್ನು ಮುಂಗಡವಾಗಿ ಕಾಯ್ದಿರಿಸಲು, ಅದನ್ನು ಪಡೆಯಲು ಸರದಿ ಸಂಖ್ಯೆಯನ್ನು ಪಡೆಯಲು ಹಾಗೂ ನಿರ್ದಿಷ್ಟ ಅವಧಿಯಲ್ಲಿ ಕಾಯ್ದಿರಿಸಿದ ಮದ್ಯವನ್ನು ಸಮೀಪದ ಮದ್ಯದಂಗಡಿಯಿಂದ ಖರೀದಿಸಲು ಈ ಆ್ಯಪ್ ಸಹಕಾರಿ. ಮದ್ಯ ಖರೀದಿಗೆ ಕಿಲೋಮೀಟರ್‌ಗಟ್ಟಲೆ ಸರದಿ ನಿಲ್ಲುವುದರಿಂದ ಕೋವಿಡ್ 19 ಸೋಂಕು ಹರಡುವ ಸಾಧ್ಯತೆ ಇದ್ದು, ಇದರಿಂದ




ಬಚಾವಾಗಲು ಈ ಆ್ಯಪ್ ಅನ್ನು ಬಳಸುವುದು ಸೂಕ್ತ.

ಬೆಳಿಗ್ಗೆ 6ರಿಂದ ರಾತ್ರಿ 10ರವರೆಗೆ ಆ್ಯಪ್‌ನಲ್ಲಿ ಬುಕ್ಕಿಂಗ್ ಪಡೆಯಲಾಗುತ್ತದೆ. ಅದಾದ ನಂತರ ಬುಕ್ಕಿಂಗ್ ಪ್ರಕ್ರಿಯೆ ಸ್ಥಗಿತಗೊಳ್ಳಲಿದೆ. ಆ್ಯಪ್‌ನಲ್ಲಿ ಮದ್ಯಕ್ಕೆ ಬುಕ್ ಮಾಡಿದರೂ ಮದ್ಯದಂಗಡಿಗಳ ಎದುರು ಕೇವಲ 5 ಮಂದಿಗೆ ಮಾತ್ರ ಸರದಿ ನಿಲ್ಲಲು ಅವಕಾಶವಿದ್ದು, ಆ್ಯಪ್‌ನಲ್ಲಿ ಜನರೇಟ್ ಆದ ಟೋಕನ್ ಇದ್ದರೆ ಮಾತ್ರ ಮದ್ಯ ಖರೀದಿಸಬಹುದು.

### ಏನಿದು ಬೆವ್‌ಕ್ಯೂ ಆ್ಯಪ್?

ಬೆವ್‌ಕ್ಯೂ ಎಂಬುದು ವರ್ಚುವಲ್ ಕ್ಯೂ ಮೊಬೈಲ್ ಆ್ಯಪ್. ಕೇರಳ ರಾಜ್ಯದ ಪಾನೀಯಗಳ ನಿಗಮವು ಈ ಆ್ಯಪ್ ಅನ್ನು ನಿರ್ವಹಿಸುತ್ತಿದೆ. ಈ ಆ್ಯಪ್ ಕೇವಲ ಮದ್ಯ ಖರೀದಿಗೆ ಮಾತ್ರ ಬಳಕೆಯಾಗುತ್ತಿಲ್ಲ. ಇದು ಮದ್ಯ ಮಾರಾಟಕ್ಕೂ ಅನುಕೂಲ. ಮದ್ಯ ಮಾರಾಟಗಾರರು, ಮದ್ಯಪ್ರಿಯರನ್ನು ನಿಯಂತ್ರಿಸಲು ಸಹಕಾರಿಯಾಗಿದೆ. ಸಾಮಾಜಿಕ ಅಂತರವನ್ನು ಕಟ್ಟುನಿಟ್ಟಾಗಿ ಅನುಸರಿಸಲು ನೆರವಾಗಿದೆ.

ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಈ ಆ್ಯಪ್ ಲಭ್ಯವಿದ್ದು, ಅದನ್ನು ಇನ್‌ಸ್ಟಾಲ್ ಮಾಡಿಕೊಳ್ಳಬೇಕು. ಬಳಿಕ ಹೆಸರು, ಮೊಬೈಲ್ ಸಂಖ್ಯೆ ಹಾಗೂ ಪಿನ್‌ಕೋಡ್ ನಮೂದಿಸಿದರೆ ವೆರಿಫಿಕೇಷನ್ ಕೋಡ್ ಮೊಬೈಲ್‌ಗೆ ಬರುತ್ತದೆ. ಅದನ್ನು ನಮೂದಿಸಿದ ಬಳಿಕ ಮದ್ಯ ಬುಕ್ ಮಾಡಬಹುದು. ಮದ್ಯಕ್ಕೆ ಸೀಮಿತವಾಗಿರುವ ಈ ಆ್ಯಪ್ ಅನ್ನು ಕ್ರಮೇಣ ದೈನಂದಿನ ಅಗತ್ಯ ವಸ್ತುಗಳ ಖರೀದಿಗೂ ವಿಸ್ತರಿಸುವ ಚಿಂತನೆಯಲ್ಲಿ ಕೇರಳ ಸರ್ಕಾರವಿದೆ. ಕೇರಳದ ಈ ಕ್ರಮ ಇತರ ರಾಜ್ಯಗಳಿಗೆ ಮಾದರಿಯಾಗಿದೆ.

### ನಮ್ಮಲ್ಲೇಕಿಲ್ಲ?

ಪಕ್ಕದ ಕೇರಳ ರಾಜ್ಯ ಕೊರೊನಾ ನಿಯಂತ್ರಣದಲ್ಲಿ ಗಮನಾರ್ಹವಾದ ಕ್ರಮಗಳನ್ನು ಕೈಗೊಂಡಿದೆ. ಇದರಿಂದಾಗಿ ದಿನೇ ದಿನೇ ಸೋಂಕಿತರ ಪ್ರಮಾಣ ಕಡಿಮೆಯಾಗುತ್ತಿದೆ. ಆದರೆ, ಕರ್ನಾಟಕದಲ್ಲಿ ಲಾಕ್‌ಡೌನ್ ಸಡಿಲಿಕೆಯಿಂದಾಗಿ ಸೋಂಕಿತರ ಪ್ರಮಾಣ ದಿನೇ ದಿನೇ ಹೆಚ್ಚುತ್ತಿದೆ. ಸಾಮಾಜಿಕ ಅಂತರ ನಿಯಮವನ್ನಂತೂ ಗಾಳಿಗೆ ತೂರಲಾಗಿದೆ. ■

## ವಿದೇಶಿ ಟಿಕ್‌ಟಾಕ್‌ಗೆ ಸ್ವದೇಶಿ ಮಿತ್ರಾನ್ ಸೆಡ್ಡು!

ಕೊರೊನಾ ವೈರಸ್ ಭೀತಿಯಿಂದಾಗಿ ದೇಶದೆಲ್ಲೆಡೆ ಲಾಕ್‌ಡೌನ್ ಜಾರಿಯಲ್ಲಿದ್ದ ಅವಧಿಯಲ್ಲಿ ಚೀನಾ ಮೂಲದ ಟಿಕ್‌ಟಾಕ್ ಆ್ಯಪ್ ಸಿಕ್ಕಾಪಟ್ಟೆ ಡೌನ್‌ಲೋಡ್ ಆಗಿತ್ತು. ಆದಾದ ಕೆಲವೇ ದಿನಗಳಲ್ಲಿ ಅದರ ದುರ್ಬಳಕೆಯಿಂದಾಗಿ ಟಿಕ್‌ಟಾಕ್ ಬ್ಯಾನ್‌ಗೆ ಒತ್ತಾಯಿಸಿ ಆನ್‌ಲೈನ್ ಕ್ಯಾಂಪೇನ್ ಸಹ ನಡೆದಿತ್ತು. ಕ್ರಮೇಣ ಟಿಕ್‌ಟಾಕ್ ಆ್ಯಪ್‌ಗೆ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ದೊರಕುತ್ತಿದ್ದ ಸ್ಟಾರ್ ರೇಟಿಂಗ್ ಪ್ರಮಾಣವು 4.7ರಿಂದ ಸದ್ಯ 3.8ಕ್ಕೆ ಇಳಿದಿದೆ.

ಈ ಬೆಳವಣಿಗೆಗೆ ಕಾರಣವೆಂಬಂತೆ




ಟಿಕ್‌ಟಾಕ್‌ಗೆ ಪರ್ಯಾಯವಾಗಿ ಸ್ವದೇಶಿ ನಿರ್ಮಿತ ‘ಮಿತ್ರಾನ್’ (Mitron) ಆ್ಯಪ್ ಗೂಗಲ್ ಪ್ಲೇ ಸ್ಟೋರ್‌ನಲ್ಲಿ 4.7 ರೇಟಿಂಗ್ ಪಡೆದುಕೊಂಡಿದ್ದು, ಅದು ಬಿಡುಗಡೆಯಾದ ಒಂದೇ ತಿಂಗಳಿನಲ್ಲಿ 50 ಲಕ್ಷಕ್ಕೂ ಅಧಿಕ ಮಂದಿ ಡೌನ್‌ಲೋಡ್ ಮಾಡಿರುವುದು ದಾಖಲೆಯಾಗಿದೆ.

ಟಿಕ್‌ಟಾಕ್ ಮಾದರಿಯೇ ಕಾರ್ಯ ನಿರ್ವಹಿಸುವ ಈ ಆ್ಯಪ್‌ನಲ್ಲಿ, ಕಿರು ಅವಧಿಯ ವಿಡಿಯೊ ಮತ್ತು ಕಂಟೆಂಟ್ ರಚಿಸಬಹುದಾಗಿದೆ. ಟಿಕ್‌ಟಾಕ್ ಬೇಡಿಕೆ ಕಳೆದುಕೊಂಡ ಬೆನ್ನಲ್ಲೇ, ಅತ್ಯಂತ ಹೆಚ್ಚು ಜನಪ್ರಿಯತೆ ಪಡೆದುಕೊಂಡಿದೆ. ಐಐಟಿ ರೂರ್ಕಿಯ ವಿದ್ಯಾರ್ಥಿ ಶಿವಾಂಕ್ ಅಗರ್ವಾಲ್, ಈ ಆ್ಯಪ್ ಅನ್ನು ಅಭಿವೃದ್ಧಿ ಪಡಿಸಿದ್ದು, ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಮಿತ್ರಾನ್ ಸ್ಟಾರ್ ರೇಟಿಂಗ್ ಮತ್ತು ಪಾಸಿಟಿವ್ ರಿವ್ಯೂ ಹೆಚ್ಚಾಗುತ್ತಿದೆ. ಟಿಕ್‌ಟಾಕ್‌ಗೆ ಸಮನಾದ ಫೀಚರ್‌ಗಳು ಮಿತ್ರೋ ಆ್ಯಪ್‌ನಲ್ಲೂ ದೊರೆಯುತ್ತಿವೆ. ಜನರು ತಮ್ಮ ಕ್ರಿಯಾತ್ಮಕ, ಸೃಜನಶೀಲತೆ ಮತ್ತು ಸಮಾಜಕ್ಕೆ ಪೂರಕವಾಗುವ ಮಾಹಿತಿ, ಮನೋರಂಜನೆ ಇಲ್ಲಿ ಹಂಚಿಕೊಳ್ಳಬಹುದು. ■